# 9ನೇ ತರಗತಿ ಧರ್ಮಸಮದೃಷ್ಟಿ ಕನ್ನಡ ನೋಟ್ಸ್-kannadapdf.com

ತರಗತಿ : 9ನೇ ತರಗತಿ

ಪಾಠದ ಹೆಸರು : ಧರ್ಮಸಮದೃಷ್ಟಿ

ಶಾಸನ ಸಂಬಂಧ ಮಾಹಿತಿ :

ಧರ್ಮಸಮದೃಷ್ಟಿ ಶಾಸನವು ೧೩೬೮ ರ ಅವಧಿಯಲ್ಲಿ ವಿಜಯನಗರ ಸಾಮ್ರಾಜ್ಯದ ಅರಸ ವೀರ ಬುಕ್ಕರಾಯನಿಗೆ ಸಂಬಂಧಿಸಿದ್ದಾಗಿದೆ. ಮತಧರ್ಮ ಸಂಘರ್ಷದಲ್ಲಿ ಜೈನರು ಹಾಗೂ ವೈಷ್ಣವರು ಸಾಮರಸ್ಯದಿಂದ ಬಾಳಬೇಕೆಂದು ಬುಕ್ಕರಾಯನು ವಿಧಿಸಿದ ಕಟ್ಟಳೆಯಿದು . ಈ ಶಾಸನವು ಬುಕ್ಕರಾಯನ ಧರ್ಮಸಮನ್ವಯತೆಯನ್ನು ಬಿಂಬಿಸುತ್ತದೆ . ಈ ಶಾಸನವನ್ನು ಬಿ.ಎಂ. ಶ್ರೀಕಂಠಯ್ಯನವರು ಸಂಪಾದಿಸಿದ ' ಕನ್ನಡಬಾವುಟ ' ಕೃತಿಯಿಂದ ಆರಿಸಿ ಕೊಳ್ಳಲಾಗಿದೆ . ಸಂಬಂಧಿಸಿದ್ದಾಗಿದೆ .

## ಅ ] ಒಂದು ವಾಕ್ಯದಲ್ಲಿ ಉತ್ತರಿಸಿ,

**1.** ಶ್ರೀವೈಷ್ಣವರೊಡನೆ ಮಹಾರಾಜನು ಏನು ಹೇಳಿದನು **?**

ಶ್ರೀವೈಷ್ಣವರೊಡನೆ ಮಹಾರಾಜನು ವೈಷ್ಣವ ದರ್ಶನಕ್ಕೂ ಜೈನದರ್ಶನಕ್ಕೂ ಭೇದವಿಲ್ಲವೆಂದು ಹೇಳಿದನು .

**2.** ರಾಯನು ವಿಧಿಸಿದ ಕಟ್ಟಳೆಯನ್ನು ಮೀರಿದರೆ ಆಗುವ ಪರಿಣಾಮವೇನು **?**

ರಾಯರು ವಿಧಿಸಿದ ಕಟ್ಟಳೆಯನ್ನು ಮೀರಿದವನು ರಾಜದ್ರೋಹಿ ಆಗುತ್ತಾನೆ .

**3.** ಬುಕ್ಕರಾಯನ ಹಿರಿಮೆ ಏನು **?**

ಅರಿರಾಯ ವಿಭಾಡ ಹಾಗೂ ಭಾಷೆಗೆ ತಪ್ಪುವ ರಾಯರ ಗಂಡ ಎಂಬುದು ಬುಕ್ಕರಾಯನ ಹಿರಿಮೆ .

**4.** ಬುಕ್ಕರಾಯನ ರಾಜ್ಯಭಾರ ಕಾಲದಲ್ಲಿ ಯಾರೊಳಗೆ ಸಂವಾದ ನಡೆಯಿತು **?**

ಬುಕ್ಕರಾಯನ ರಾಜ್ಯಭಾರ ಕಾಲದಲ್ಲಿ ಜೈನರಿಗೂ ಭಕ್ತರಿಗೂ ( ಶ್ರೀವೈಷ್ಣವರಿಗೂ ) ಸಂವಾದ ನಡೆಯಿತು .

**5.** ನಾಡ ಭವ್ಯ ಜನರು ಬುಕ್ಕರಾಯನ ಬಳಿ ಏನೆಂದು ಬಿನ್ನಹ ಮಾಡಿದರು **?**

ನಾಡ ಭವ್ಯ ಜನರು ಬುಕ್ಕರಾಯನ ಬಳಿ ಭಕ್ತರು ( ಶ್ರೀವೈಷ್ಣವರು ) ಮಾಡುವ ಅನ್ಯಾಯಗಳನ್ನು ಬಿನ್ನಹ ಮಾಡಿದರು .

Kannadapdf.com

## ಆ ] ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ .

**1.** ಬುಕ್ಕರಾಯನು ನಡೆಸಿದ ಧರ್ಮಸಭೆಗೆ ಯಾರನ್ನೆಲ್ಲ ಆಹ್ವಾನಿಸಿದನು **?**

| | |
|---|---|
| Download: Kannadapdf.com | https://kannadapdf.com/ |

ಕೋವಿಲ್ , ತಿರುಮಲೆ , ಪೆರುಮಾಳ್ ಕೋವಿಲ್ , ಮುಖ್ಯಕ್ಷೇತ್ರಗಳ ಸಕಲಾಚಾರ್ಯರು , ಸಕಲ ಧರ್ಮಾನುಯಾಯಿಗಳು , ಸಕಟ ಸಾತ್ವಿಕರು , ಮೊಷಿಕರು , ತಿರುಪಣಿ , ತಿರುವಿಡಿ , ತಣ್ಣೀರವರು , ನಲವತ್ತೆಂಟು ಕುಲದವರು , ಸಾವಂತ ಸಾಮಂತರಾದ ಮಲೆನಾಡಿನವರು , ತಿರಿಕುಲ , ಜಾಂಬವಕುಲ ಒಳಗೊಂಡ ಹದಿನೆಂಟು ನಾಡಿನವರನ್ನು ಬುಕ್ಕರಾಯನು ನಡೆಸಿದ ಧರ್ಮಸಭೆಗೆ ಆಹ್ವಾನಿಸಿದನು .

**2.** ಜೈನಧರ್ಮದ ಸುಧಾರಣೆಗಾಗಿ ಬುಕ್ಕರಾಯನು ಕೈಗೊಂಡ ಕ್ರಮಗಳೇನು **?**

ಜೈನಧರ್ಮದ ಸುಧಾರಣೆಗಾಗಿ ಬುಕ್ಕರಾಯನು ಸಮಸ್ತ ರಾಜ್ಯದ ಜೈನಮತದ ಜನಗಳ ಅನುಮತದಿಂದ “ ಬೆಳುಗೊಳದ ಪುಣ್ಯಕ್ಷೇತ್ರದಲ್ಲಿ ವೈಷ್ಣವ ಅಂಗರಕ್ಷೆಗಾಗಿ ಸಮಸ್ತ ರಾಜ್ಯದೊಳಗೆ ಇರುವಂತಹ ಜೈನರ ಬಾಗಿಲು ಕಟ್ಟಳೆಯಾಗಿ ಮನೆಮನೆಗೆ ವರ್ಷಕ್ಕೆ ಒಂದು ಹಣ ಕೊಡುವುದು . ಹಾಗೆ ಸಂಗ್ರಹಿಸಿದ ಆ ಒಂದು ಹಣದಿಂದ ದೇವರ ಅಂಗರಕ್ಷೆಗೆ ಇಪ್ಪತ್ತು ಆಳುಗಳನ್ನು ನೇಮಿಸಿ , ಉಳಿದ ಹೊನ್ನಿನಿಂದ ಜೀರ್ಣಾವಸ್ಥೆಯಲ್ಲಿರುವ ಜಿನಾಲಯಗಳಿಗೆ ಸುಣ್ಣ ಬಳಿಸುವುದು ಎಂದು ಶಾಸನ ಬರೆಸಿದನು .

**3.** ' ಧರ್ಮಸಮದೃಷ್ಟಿ ' ಪಾಠದಲ್ಲಿ ರಾಮಾನುಜಾಚಾರ್ಯರ ಗುಣವಿಶೇಷತೆಯನ್ನು ಹೇಗೆ ಕೊಂಡಾಡಲಾಗಿದೆ **?**

' ಧರ್ಮಸಮದೃಷ್ಟಿ ' ಪಾಠದಲ್ಲಿ ರಾಮಾನುಜಾಚಾರ್ಯರನ್ನು ಪಾಷಂಡ ( ನಾಸ್ತಿಕ ) ಸಾಗರ ಮಹಾಬಡಬಾ ಮುಖಾಗ್ನಿಯಂತಿರುವವರು , ಶ್ರೀರಂಗರಾಜ ಪಾದಕಮಲಗಳಲ್ಲಿ ಮೂಲ ದಾಸರಾದವರು . ಶ್ರೀವಿಷ್ಣುಲೋಕ ಮುನಿಮಂಟಪ ಯತಿರಾಜರಾಜರಂತಿರುವವರು ಎಂದು ಕೊಂಡಾಡಲಾಗಿದೆ . ಮಾರ್ಗದಾಯಿಗಳು , ತಿರುನಾರಾಯಣಪುರ

## ಇ ] ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರಿಸಿ ,

**1.** ಬುಕ್ಕರಾಯನು ತನ್ನ ಆಳ್ವಿಕೆಯ ಕಾಲದಲ್ಲಿ ಧರ್ಮಸಮದೃಷ್ಟಿಯನ್ನು ಹೇಗೆ ಆಚರಣೆಗೆ ತಂದನು **?**

ಬುಕ್ಕರಾಯನು ತನ್ನ ಆಳ್ವಿಕೆಯ ಕಾಲದಲ್ಲಿ ಜೈನರಿಗೂ ವೈಷ್ಣವರಿಗೂ ಕಲಹವುಂಟಾದಾಗ ಅದನ್ನು ಸರಿಪಡಿಸಲು ಕೋವಿಲ್ , ತಿರುಮಲೆ , ಪೆರುಮಾಳ್ಕೋವಿಲ್ , ತಿರುನಾರಾಯಣಪುರ ಮುಖ್ಯಕ್ಷೇತ್ರಗಳ ಸಕಾಚಾರ್ಯರು , ಸಕಲ ಧರ್ಮಾನುಯಾಯಿಗಳು , ಸಕಟ ಸಾತ್ವಿಕರು , ಮೋಷಿಕರು , ತಿರುಪಣಿ , ತಿರುವಿಡಿ , ತಣ್ಣೀರವರು , ನಲವತ್ತೆಂಟು ಕುಲದವರು , ಮುಂತಾದವರನ್ನು ಒಳಗೊಂಡ ಹದಿನೆಂಟು ನಾಡಿನವರನ್ನು ಬುಕ್ಕರಾಯನು ಧರ್ಮಸಭೆಗೆ ಆಹ್ವಾನಿಸಿದನು . ವೈಷ್ಣವರ ಕೈಯಲ್ಲಿ ಜೈನರ ಕೈಯನ್ನಿಟ್ಟು ಜೈನಧರ್ಮಕ್ಕೂ ವೈಷ್ಣವಧರ್ಮಕ್ಕೂ ಭೇದವಿಲ್ಲವೆಂದು ಹೇಳಿದನು ಮತ್ತು ಜೈನಧರ್ಮಕ್ಕೆ ಈ ಹಿಂದೆ ಇದ್ದಂತೆ ಪಂಚಮಹಾವಾದ್ಯಗಳು , ಕಲಶವೂ ಸಲ್ಲಬೇಕೆಂದೂ ಭಕ್ತರ ( ವೈಷ್ಣವರ ) ದೆಸೆಯಿಂದ ಜೈನರಿಗೆ ಹಾನಿಯುಂಟಾದರೆ ಅದನ್ನು ವೈಷ್ಣವರು ತಮ್ಮ ಹಾನಿಯೆಂದು ಭಾವಿಸಬೇಕೆಂದು ಹೇಳಿದನು . ಸಮಸ್ತ ರಾಜ್ಯದ ಜೈನಮತದ ಜನಗಳ ಅನುಮತದಿಂದ “ ಬೆಳುಗೊಳದ ರಾಜ್ಯದೊಳಗೆ ಇರುವಂತಹ ಜೈನರ ಬಾಗಿಲು ಕಟ್ಟಳೆಯಾಗಿ ಮನೆಮನೆಗೆ ವರ್ಷಕ್ಕೆ ಒಂದು ಪುಣ್ಯಕ್ಷೇತ್ರದಲ್ಲಿ ವೈಷ್ಣವ ಅಂಗರಕ್ಷೆಗಾಗಿ ಸಮಸ್ತ ಹಣ ಕೊಡುವುದು . ಹಾಗೆ ಸಂಗ್ರಹಿಸಿದ ಆ ಒಂದು ಹಣದಿಂದ ದೇವರ ಅಂಗರಕ್ಷೆಗೆ ಇಪ್ಪತ್ತು ಆಳುಗಳನ್ನು ನೇಮಿಸಿ , ಉಳಿದ ಹೊನ್ನಿನಿಂದ ಜೀರ್ಣಾವಸ್ಥೆಯಲ್ಲಿರುವ ಜಿನಾಲಯಗಳಿಗೆ ಸುಣ್ಣ ಬಳಿಸುವುದು " ಎಂದು ಶಾಸನ ಬರೆಸಿದನು . ಹೀಗೆ ಧರ್ಮಸಮದೃಷ್ಟಿಯನ್ನು ಆಚರಣೆಗೆ ತಂದನು .

kannadapdf.com

# ಈ ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ.

**1. "** ಎಲ್ಲಾ ರಾಜ್ಯದೊಳಗುಳ್ಳಂತಹ ಬಸ್ತಿಗಳಿಗೆ ಶ್ರೀಇಂಗವರು ಶಾಸನವ ನಟ್ಟು ಪಾಲಿಸುವರು **"**

ಆಯ್ಕೆ : - ಈ ವಾಕ್ಯವನ್ನು ಶ್ರೀ ಬಿ . ಎಂ.ಶ್ರೀ ಅವರು ಸಂಪಾದಿಸಿರುವ ಕನ್ನಡ ಬಾವುಟ ' ಕೃತಿಯಿಂದ ಆಯ್ದ ' ಧರ್ಮಸಮದೃಷ್ಟಿ ' ಶಾಸನದಿಂದ ಆರಿಸಲಾಗಿದೆ . ಸಂದರ್ಭ : - ರಾಜನಾದವೀರಬುಕ್ಕರಾಯನು ಶ್ರೀವೈಷ್ಣವರು ಹಾಗೂ ಜೈನರ ನಡುವೆ ಸಂಘರ್ಷವುಂಟಾದ ಸಮಯದಲ್ಲಿ ಸಭೆ ಕರೆದು , ಅವರ ಕೈ ಕೈ ಹಿಡಿಸಿ ಸಾಮರಸ್ಯದಿಂದ ಇರುವಂತೆ ಸೂಚಿಸಿದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ .

ಸ್ವಾರಸ್ಯ : - ಶ್ರೀವೈಷ್ಣವರು ಜೈನ ಬಸದಿಗಳನ್ನು ಗೌರವಿಸಬೇಕು ಎಂದು ಶಾಸನ ಬರೆಸಿರುವುದರಲ್ಲಿ ರಾಜನಾದ ವೀರಬುಕ್ಕರಾಯನ ಧರ್ಮಸಮದೃಷ್ಟಿಯನ್ನು ಕಾಣಬಹುದಾಗಿದೆ .

**2. "** ಪಾಷಂಡ ಸಾಗರ ಮಹಾಬಡವಾಮುಖಾಗ್ನಿ **: "**

ಆಯ್ಕೆ : - ಈ ವಾಕ್ಯವನ್ನು ಶ್ರೀ ಬಿ . ಎಂ.ಶ್ರೀ ಅವರು ಸಂಪಾದಿಸಿರುವ ಕನ್ನಡ ಬಾವುಟ ' ಕೃತಿಯಿಂದ ಆಯ್ದ ' ಧರ್ಮಸಮದೃಷ್ಟಿ ' ಶಾಸನದಿಂದ ಆರಿಸಲಾಗಿದೆ . ಸಂದರ್ಭ : - ವಿಜಯನಗರ ಸಾಮ್ರಾಜ್ಯದ ರಾಜ ವೀರಬುಕ್ಕರಾಯನ ಕಾಲದ ' ಧರ್ಮಸಮದೃಷ್ಟಿ ' ಶಾಸನದ ಪ್ರಾರಂಭದಲ್ಲಿ ಶ್ರೀರಾಮಾನುಜಾಚಾರ್ಯರನ್ನು ಸ್ಮರಿಸುವ ಸಂದರ್ಭದಲ್ಲಿ ಶಾಸನಕಾರನು ಈ ಮಾತನ್ನು ಹೇಳುತ್ತಾನೆ .

ಸ್ವಾರಸ್ಯ : - ಸಮುದ್ರ ಮಧ್ಯದಲ್ಲಿ ಬಡಬಾನಲ ಇರುವಂತೆ ನಾಸ್ತಿಕರ ನಡುವೆ ಶ್ರೀರಾಮಾನುಜಾಚಾರ್ಯರು ಆಸ್ತಿಕರಾಗಿ ಶೋಭಿಸುತ್ತಿದ್ದರು ಎಂಬುದನ್ನು ಈ ಮಾತಿನಲ್ಲಿ ಬಹುಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ .

**3. "** ಈ ಮಾಡಿದ ಕಟ್ಟಳೆಯನು ಆವನೊಬ್ಬನು ಮೀರಿದವನು ರಾಜದ್ರೋಹಿಯಪ್ಪನು **" .**

ಆಯ್ಕೆ : - ಈ ವಾಕ್ಯವನ್ನು ಶ್ರೀ ಬಿ . ಎಂ.ಶ್ರೀ ಅವರು ಸಂಪಾದಿಸಿರುವ ' ಕನ್ನಡ ಬಾವುಟ ' ಕೃತಿಯಿಂದ ಆಯ್ದ ' ಧರ್ಮಸಮದೃಷ್ಟಿ ' ಶಾಸನದಿಂದ ಆರಿಸಲಾಗಿದೆ . ಸಂದರ್ಭ : - ರಾಜನಾದವೀರಬುಕ್ಕರಾಯನು ಶ್ರೀವೈಷ್ಣವರು ಹಾಗೂ ಜೈನರ ನಡುವೆ ಸಂಘರ್ಷವುಂಟಾದ ಸಮಯದಲ್ಲಿ ಸಭೆ ಕರೆದು , ಅವರ ಕೈಕೈ ಹಿಡಿಸಿ ಸಾಮರಸ್ಯದಿಂದ ಇರುವಂತೆ ಸೂಚಿಸಿ ಶಾಸನ ಮಾಡಿದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ .

ಸ್ವಾರಸ್ಯ : - ರಾಜನು ಮಾಡಿದ ಶಾಸನವನ್ನು ಯಾರು ಮೀರಬಾರದು : ಮೀರಿದರೆ ಅವರಿಗೆ ರಾಜದ್ರೋಹಿಗೆ ಆಗುವ ಶಿಕ್ಷೆಯು ಆಗುತ್ತದೆ ಎಂಬ ಎಚ್ಚರಿಕೆಯನ್ನು ಈ ಮಾತಿನಲ್ಲಿ ಕಾಣಬಹುದಾಗಿದೆ .

**4 "** ಮಿಕ್ಕ ಹೊನ್ನಿಂಗೆ ಜೀರ್ಣಜಿನಾಲಯಂಗಳಿಗೆ ಸೊದೆಯನಿಕ್ಕುವುದು **. "**

**ಆಯ್ಕೆ : - ಈ ವಾಕ್ಯವನ್ನು ಶ್ರೀ ಬಿ.ಎಂ.ಶ್ರೀ ಅವರು ಸಂಪಾದಿಸಿರುವ ' ಕನ್ನಡ ಬಾವುಟ ' ಕೃತಿಯಿಂದ ಆಯ್ದ ' ಧರ್ಮಸಮದೃಷ್ಟಿ ' ಶಾಸನದಿಂದ ಆರಿಸಲಾಗಿದೆ . ಸಂದರ್ಭ : - ರಾಜನಾದ ವೀರಬುಕ್ಕರಾಯನು ಜೈನಧರ್ಮದ ಸುಧಾರಣೆಗಾಗಿ ಕೈಗೊಳ್ಳಬೇಕಾದ ಕಾರ್ಯಗಳನ್ನು ಸೂಚಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ .**

ಸ್ವಾರಸ್ಯ : - ಜೀರ್ಣಾವಸ್ಥೆಯಲ್ಲಿರುವ ಜಿನಾಲಯಗಳಿಗೆ ಸುಣ್ಣ ಬಳಿದು ಪುನಶ್ಚೇತನಗೊಳಿಸಬೇಕು ಎಂಬ ವಿಶಾಲ ಮನೋಭಾವನೆಯನ್ನು ಈ ಮಾತಿನಲ್ಲಿ ಕಾಣಬಹುದಾಗಿದೆ .

| Download: Kannadapdf.com | https://kannadapdf.com/ |
|---|---|

# 9ನೇ ತರಗತಿ ಧರ್ಮಸಮದೃಷ್ಟಿ ಕನ್ನಡ ನೋಟ್ಸ್-kannadapdf.com

## 1 ] ತತ್ಸಮ - ತದ್ಭವಗಳು

1 ) ವರ್ಷ – ವರುಷ

2 ) ಲೋಕ - ರೋಗ

3 ) ವೀರ - ಬೀರ

4 ) ಸಾಮಂತ - ಸಾವಂತ

5 ) ತಟ - ದಡ

6 ) ಮುಖ – ಮೊಗ

7 ) ಶ್ರೀ – ಸಿರಿ

8 ) ಮಂಟಪ - ಮಂಡಪ

9 ) ಭಕ್ತ – ಬಕುತ

10 ) ದಿಶಾ – ದೆಸೆ

11 ) ಸುಧೆ - ಸೋಧೆ

12) ದೃಷ್ಟಿ – ದಿಟ್ಟಿ

## 2 ) ಕೊಟ್ಟಿರುವ ಪದಗಳನ್ನು ಬಿಡಿಸಿ ಸಂಧಿ ಹೆಸರಿಸಿ ,

ಚರಣಾಂಬುಜ , ಮಂಡಳೇಶ್ವರ , ಸಕಳಾಚಾರ , ಭೇದವಿಲ್ಲ . ಕೈವಿಡಿದು , ವೃದ್ಧಿಯಾಗಿ , ಭೇದವಾಗಿ , ಕಾಣಲಾಗದು . ಜಿನಾಲಯ , ತಪ್ಪಲೀಯದೆ , ಚಂದ್ರಾರ್ಕ ಚರಣಾಂಬುಜ

| | | | |
|---|---|---|---|
| ಚರಣಾಂಬುಜ | ಚರಣ + | ಅಂಬುಜ | ಸವರ್ಣದೀರ್ಘ ಸಂಧಿ |
| ಮಂಡಳೇಶ್ವರ | ಮಂಡಳ + | ಈಶ್ವರ | ಗುಣಸಂಧಿ |

kannadaPdf.com

| | | | |
|---|---|---|---|
| ಸರಳಾಚಾರ್ಯ | ಸರಳ+ | ಆಚಾರ್ಯ | ಸವರ್ಣದೀರ್ಘ ಸಂಧಿ |
| ಭೇದವಿಲ್ಲ | ಭೇದ + | ಇಲ್ಲ | ವಕಾರಾಗಮ ಸಂಧಿ |
| ಕೈವಿಡಿದ | ಕೈ+ | ಪಿಡಿದು | ವಕಾರಾಗಮ ಸಂಧಿ |
| ವೃದ್ಧಿಯಾಗಿ | ವೃದ್ಧ + | ಆಗಿ | ಯಕಾರಾಗಮ ಸಂಧಿ |
| ಭೇದವಾಗಿ | ಭೇದ + | ಆಗ | ವಕಾರಾಗಮ ಸಂಧಿ |
| ಕಾಣಲಾಗದು | ಕಾಣಲು+ | ಆಗದು | ಲೋಪಸಂಧಿ |
| ಜಿನಾಲಯ | ಜಿನ + | ಆಲಯ | ಸವರ್ಣದೀರ್ಘ ಸಂಧಿ |
| ತಪ್ಪಲೀಯದೆ | ತಪ್ಪಲು + | ಈಯದೆ | ಲೋಪಸಂಧಿ |
| ಚಂದ್ರಾರ್ಕ | ಚಂದ್ರ + | ಅರ್ಕ | ಸವರ್ಣದೀರ್ಘ ಸಂಧಿ |

KannadaPdf.com